ಭದ್ರಾ ಮೇಲ್ದಂಡೆ ಯೋಜನೆಯನ್ನು ಐದು ವರ್ಷಗಳಲ್ಲಿ ಅನುಷ್ಠಾನ ಗೊಳಿಸುವ ಗುರಿ ನಿಗದಿಪಡಿಸಲಾಗಿದೆ.

ಇ) ಈ ಯೋಜನೆಯಡಿಯಲ್ಲಿ ತುರವನೂರು ಹೋಬಳಿಗೆ ಎಷ್ಟು ಪ್ರಮಾಣದ ನೀರನ್ನು ಸರಬರಾಜು ಮಾಡಲಾಗುವುದು?

ಚುತ್ರದುರ್ಗ ಶಾಖಾ ಕಾಲುವೆಯಲ್ಲಿ ನೀರಾವರಿಗಾಗಿ 15.90 ಟಿ.ಎಂ.ಸಿ. ನೀರನ್ನು ಬಳಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಮಾಡಲಾಗಿರುವ ಪೂರ್ವಭಾವಿ ಅಧ್ಯಯನದಂತೆ, ತುರುವನೂರು ಹೋಬಳಿಯ ಬೆಳಗಟ್ಟ, ಬಗ್ಗಲರಂಗವ್ವನಹಳ್ಳಿ, ಹಾಯ್ಕಲ್ಲು, ಬಾಗೇನಾಳ್, ಚಿಕ್ಕಜಗಲೂರು ಮತ್ತು ರಾಗಲೊಬನಹಳ್ಳಿಯ ಕೆಲವು ಪ್ರದೇಶಗಳು ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರಾವರಿಗೆ ಒಳಪಡುತ್ತವೆ. ಸದರಿ ಪ್ರದೇಶಗಳು ಚಿತ್ರದುರ್ಗ ಶಾಖಾ ಕಾಲುವೆಯ ಕೊನೆಯ ಹಂತದಲ್ಲಿ ಬರುತ್ತವೆ. ಅಚ್ಚುಕಟ್ಟು ಪ್ರದೇಶಗಳ ವಿವರವಾದ ಸರ್ವೆ ಕಾರ್ಯವನ್ನು ಇನ್ನೂ ಕೈಗೆತ್ತಿಕೊಂಡಿಲ್ಲ. ಸರ್ವೆಕಾರ್ಯವು ಸಂಪೂರ್ಣಗೊಂಡು, ಈ ಅಚ್ಚುಕಟ್ಟು ಪ್ರದೇಶಗಳ ವಿಸ್ತೀರ್ಣವನ್ನು ಅಂತಿಮಗೊಳಿಸಿದ ನಂತರ, ನೀರಿನ ಪ್ರಮಾಣದ ವಿವರವನ್ನು ತಿಳಿಸಲು ಸಾಧ್ಯವಾಗುವುದು.

ಜಸಂಇ 23 ಡಬ್ಲ್ಯೂಎಲ್ಎ 2009

(ಬಸವರಾಜು ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನ ಸಭೆ

348 ಶ್ರೀ ವಸಂತ ಬಂಗೇರ.ಕೆ.
ಮಾನ್ಯ ಕಂದಾಯ ಸಚಿವರು.

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಈವರೆವಿಗೂ ಅಕ್ರಮ-ಸಕ್ರಮ ಸಮಿತಿ, ಆರಾಧನ ಸಮಿತಿ, ಆಶ್ರಯ ಸಮಿತಿ ಹಾಗೂ ಇನ್ನಿತರ ಸಮಿತಿಗಳು ರಚನೆಯಾಗಿರುವುದಿಲ್ಲ, ಇದಕ್ಕೆ ಕಾರಣವೇನು;

ಅನಧಿಕೃತ ಸಾಗುವಳಿಯನ್ನು ಸಕ್ರಮಿಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಎ ಮತ್ತು 94ಬಿ ರಡಿ ನಮೂನೆ 50, 53ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡಲು ಕಾಯ್ದೆಯಲ್ಲಿ ಕಲ್ಪಿಸಿದ್ದ ಕಾಲಾವಧಿಯು ದಿ:26.04.2008ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ಅವಧಿಯನ್ನು ಮುಂದುವರೆಸಲು ಕಾಯ್ದೆಗೆ ತಿದ್ದುಪಡಿ ತರಲು ವಿಧೇಯಕವನ್ನು ಪ್ರಸ್ತುತ ನಡೆಯುವ ವಿಧಾನ ಮಂಡಲದ ಅಧವೇಶನದಲ್ಲಿ ಮಂಡಿಸಲಾಗುತ್ತದೆ. ಕಾಯ್ದೆಗೆ ತಿದ್ದುಪಡಿ ಆದೇಶ ಜಾರಿಗೆ ಬಂದ ನಂತರ ಅಕ್ರಮ-ಸಕ್ರಮ ಸಮಿತಿಗಳನ್ನು ರಚಿಸಲಾಗುವುದು.

ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯು ಸರ್ಕಾರದ ಆದೇಶ ಸಂಖ್ಯೆ: ಕಂಇ 12 ಮುಸರ 2008, ದಿ:31.12.2008ರನ್ವಯ ರಚಿಸಲಾಗಿದೆ ಹಾಗೂ ಬೆಳ್ತಂಗಡಿ ಆಶ್ರಯ ಸಮಿತಿಯನ್ನು ವಸತಿ ಇಲಾಖೆಯ ಆದೇಶ ಸಂಖ್ಯೆ: ವಇ 31 ಹೆಚ್ಎಎಸ್ 08, ದಿ:12.12.2008ರನ್ವಯ ರಚಿಸಲಾಗಿದೆ ಎಂದು ವಸತಿ ಇಲಾಖೆಯ ಪತ್ರ ಸಂಖ್ಯೆ: ವಇ 51 ಹೆಚ್ಎಎಂ 2009, ದಿ:07.07.2009ರಲ್ಲಿ ತಿಳಿಸಿದೆ.

ಆ) ಸಮಿತಿಗಳನ್ನು ರಚನೆ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಮೇಲೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಆರ್ಡಿ 64 ಎಲ್ಜಿಎ 2009

(ಜಿ.ಕರುಣಾಕರ ರೆಡ್ಡಿ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

172 ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ) ಇಂಡಿ ಮತಕ್ಷೇತ್ರದಲ್ಲಿ ಯಾವ ಯಾವ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ.

ಸಕ್ಕರೆ ಕಾರ್ಖಾನೆ, ವೈನ್, ಜವಳಿ ಮತ್ತು ಸಿದ್ಧ ಉಡುಪು ತಯಾರಿಕಾ ಘಟಕಗಳನ್ನು ಸ್ಥಾಪಿಸಬಹುದಾಗಿದೆ. ಈಗಾಗಲೇ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯು ಎರಡು ಹೊಸ ಸಕ್ಕರೆ ಕಾರ್ಖಾನೆ ಹಾಗೂ ಒಂದು ವಿದ್ಯುತ್ ಉತ್ಪಾದನಾ ಘಟಕಕ್ಕೆ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ.

ಆ) ಈ ಕಾಮಗಾರಿಗಳಿಗಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಯೋಜನೆ ಸರಕಾರದ ಮುಂದಿದೆಯೇ,

ಮೇಲ್ಕಂಡ ಎರಡು ಸಕ್ಕರೆ ಕಾರ್ಖಾನೆಗಳಿಗೆ ಒಟ್ಟು 192 ಎಕರೆ ಭೂಪ್ರದೇಶ ಅವಶ್ಯಕವಿದ್ದು, 94 ಎಕರೆ ಜಾಗವನ್ನು ಮೆ: ಜಮಖಂಡಿ ಶುಗರ್ಸ್ ಲಿಮಿಟೆಡ್ ರವರು ಕೆಐಎಡಿಬಿ ಮುಖೇನ ಹಾಗೂ 98 ಎಕರೆ ಜಾಗವನ್ನು ಮೆ: ಇಂಡಿಯನ್ ಶುಗರ್ ಕಂಪನಿ ಲಿಮಿಟೆಡ್ ರವರು ನೇರವಾಗಿ ರೈತರಿಂದ ಖರೀದಿಸ ಬೇಕಾಗಿದೆ.

ಇ) ಹಾಗಿದ್ದಲ್ಲಿ, ಎಷ್ಟು ಭೂಮಿಯನ್ನು ಯಾವ ಸ್ಥಳದಲ್ಲಿ ಸ್ವಾಧೀನಪಡಿಸಿ ಕೊಳ್ಳ ಬೇಕೆಂಬುದರ ಬಗ್ಗೆ ಸಿದ್ಧಪಡಿಸಿದ ಯೋಜನೆ ಸರ್ಕಾರದ ಮುಂದಿದೆ,

(ಅ)ಮೆ: ಜಮಖಂಡಿ ಶುಗರ್ಸ್ ಲಿಮಿಟೆಡ್, ನಾದ-ಕೆ.ಡಿ ಗ್ರಾಮ, ಇಂಡಿ ತಾಲ್ಲೂಕು ಈ ಗ್ರಾಮದಲ್ಲಿ 84 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧಿನ ವೆಚ್ಚವನ್ನು ಕೆಐಎಡಿಬಿಗೆ ಪಾವತಿಸಬೇಕಾಗಿದೆ.